**ಅಸಲು ದಾವಾ ನಂ. 188/2018** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 13-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಎ ಬಿ ಎಸ್ ರವರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಬೆಂಗಳೂರಿಗೆ ಹೋಗಿ 25 ವರ್ಷ ಆಗಿರುತ್ತದೆ. ಆಗಿನಿಂದಲೂ ನಾನು ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. 2ನೇ ವಾದಿ ನನ್ನ ಮಗಳು. 2ನೇ ವಾದಿ ಬೆಂಗಳೂರಿನಲ್ಲಿ ಹುಟ್ಟಿರುತ್ತಾಳೆ. ಅವಳು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾಳೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿ ಇರುವ 2ನೇ ವಾದಿಯ ಅಂಕಪಟ್ಟಿಯನ್ನು ತೋರಿಸಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿ ಇರುವ 2ನೇ ವಾದಿಯ ವರ್ಗಾವಣೆ ಪ್ರಮಾಣಪತ್ರವನ್ನು ತೋರಿಸಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನನ್ನ ಮಗಳು ಈಗ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಳೆ. ನಾನು ದಾವೆಯಲ್ಲಿ ಹೇಳಿದ ವಿಳಾಸದಲ್ಲಿ ವಾಸವಿರಲಿಲ್ಲ ಎಂದರೆ ಸಾಕ್ಷಿಯು ನಾನು ಐದು ವರ್ಷ ಅಲ್ಲಿ ವಾಸವಿದ್ದೆ, ಈಗ ಬೆಂಗಳೂರಿಗೆ ಹೋಗಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಎಲ್ಲಾ ಗುರುತಿನ ಚೀಟಿಗಳಲ್ಲಿ ಬೆಂಗಳೂರಿನ ವಿಳಾಸ ನಮೂದಾಗಿದೆ ಎಂದರೆ ಸರಿ. ಅದರಲ್ಲಿ ನನ್ನ ಗಂಡನ ಹೆಸರು ಮತ್ತು ನನ್ನ ಮಕ್ಕಳ ತಂದೆಯ ಹೆಸರು ನಮೂದಾಗಿದೆ ಎಂದರೆ ಸರಿ. ನಿಡಿ-1 ಮತ್ತು 2 ರಲ್ಲಿ 2ನೇ ವಾದಿಯ ತಂದೆಯ ಹೆಸರು ಕುಮಾರಸ್ವಾಮಿ, ತಾಯಿ ರೇಣುಕಾ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಆ ಕಾರಣಕ್ಕೆ ನಾನು ಶಂಕರಪ್ಪನ ಮದುವೆಯಾಗಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿಯು ಮದುವೆಯಾದಾಗ ಶಂಕರಪ್ಪನನ್ನು ಕುಮಾರಸ್ವಾಮಿ ಎಂದು ಕರೆಯುತ್ತಿದ್ದರು, ಆ ಕಾರಣಕ್ಕೆ ಆ ರೀತಿ ಕೊಟ್ಟಿದ್ದೆವು ಎಂದು ಉತ್ತರಿಸುತ್ತಾರೆ.

ನಾನು ಸೂರನಾಯಕನಹಳ್ಳಿ ಗ್ರಾಮದ ಬಸವರಾಜಪ್ಪನವರ ಮಗ ಕುಮಾರಸ್ವಾಮಿಯವರ 2ನೇ ಹೆಂಡತಿ ನಾನಾಗಿರುತ್ತೇನೆ ಎಂದರೆ ಸರಿಯಲ್ಲ. ಅವರ ಮೊದಲನೇ ಹೆಂಡತಿ ಪಾರ್ವತಮ್ಮ ಈಗಲೂ ಕೂಡ ಅಂಗನವಾಡಿ ಶಿಕ್ಷಕಿಯಾಗಿ ಸೂರನಾಯಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಶಂಕರಪ್ಪನಿಗೆ ಮತ್ತೊಂದು ಹೆಸರು ಇತ್ತು ಎಂದು ನಮೂದು ಮಾಡಿರುವುದಿಲ್ಲ. ಶಂಕರಪ್ಪನವರ ಮರಣಪ್ರಮಾಣಪತ್ರದಲ್ಲೂ ಕೂಡ ಅವರ ಹೆಂಡತಿ ಶಿವಗಂಗಮ್ಮ ಎಂದು ಇದೆ ಎಂದರೆ ಸರಿ. ನಾನು ನನ್ನ ವಾದಪತ್ರದಲ್ಲಿ ಪ್ರತಿವಾದಿಯರು ಶಂಕರಪ್ಪನವರ 2ನೇ ಪತ್ನಿ ಮತ್ತು ಮಕ್ಕಳು ಎಂದು ದಾವಾ ಅಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸೂರನಾಯಕನಹಳ್ಳಿ ಗ್ರಾಮದ ಸ ನಂ.13/1 ರ ಮನೆಯಲ್ಲಿ ವಾಸವಾಗಿದ್ದೆ. ಅದರ ಚಕ್ಕುಬಂದಿ ಪೂಃ ಖಾಲಿ ನಿವೇಶನ, ಪಃ ಸರ್ಕಾರಿ ರಸ್ತೆ, ಉಃ ಮಲ್ಲಪ್ಪನವರ ಮನೆ, ದಃ ಶಿವಮ್ಮನವರ ಮನೆ ಇರುತ್ತದೆ. ಸದರಿ ಅಕ್ಕಪಕ್ಕದ ಮನೆಯವರನ್ನು ಕರೆಸಿ ನನ್ನ ಗಂಡ ಯಾರು ಎಂದು ಹೇಳಿಸುತ್ತೇನೆ.

ಸ ನಂ.52/5 ರ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನ್ನ ಭಾವ ಬಸವರಾಜು ಮತ್ತು ಶಿವಮ್ಮನವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಸ ನಂ.13/1ಡಿ ರ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ ನಂ.42/3ಬಿ ರ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ ನಂ.69/16 ರ ಆಸ್ತಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಅದು ನನ್ನ ಗಂಡನ ಹೆಸರಿನಲ್ಲಿ ಇತ್ತು ಅದನ್ನು ಈಗ ಮಾರಿರುತ್ತಾರೆ ಎಂದು ಉತ್ತರಿಸುತ್ತಾರೆ. ಅದನ್ನು ಮಾರಿರುವ ಬಗ್ಗೆ ನಾನು ದಾವೆಯಲ್ಲಿ ಹೇಳಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 2ನೇ ಐಟಂ ಸ ನಂ.69/16 ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದನ್ನು ಊರಿನವರಾದ ಗಂಗಾಧರ್ ಎಂಬುವರು ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

ಸದರಿ ಆಸ್ತಿ ಮಾರಾಟ ಆದ ಬಗ್ಗೆ ನಾನು ದಾವೆಯಲ್ಲಿ ಹೇಳಿರುವುದಿಲ್ಲ, ಯಾಕೆಂದರೆ ಯಾವಾಗ ಮಾರಿದ್ದಾರೆ ಎಂದು ಅಷ್ಟಾಗಿ ನನಗೆ ಗೊತ್ತಿರಲಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 3ನೇ ಐಟಂ ಸ ನಂ.13/1ಡಿ ಈಗ ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದು ಮನೆ ಇರುವ ಜಾಗ ಆಗಿರಬಹುದು ಎಂದು ಉತ್ತರಿಸುತ್ತಾರೆ. ಸ ನಂ.13/1ಡಿ ಆಸ್ತಿ ರಾಮೇಗೌಡ ಮತ್ತು ಶಿವಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಗೆ ಸದರಿ ಸ ನಂ.13/1ಡಿ ಆಸ್ತಿಯ ಆರ್ ಟಿ ಸಿ ಯನ್ನು ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸ ನಂ.69/16 ನಿಪಿ-3 ರ ಪ್ರಕಾರ ರಾಮೇಗೌಡನ ಹೆಸರಿನಲ್ಲಿ ಇದೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಶಿವಮ್ಮ ರವರನ್ನೂ ಕೂಡ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಸ ನಂ.53/2 ರ ಆಸ್ತಿ 3ನೇ ಪ್ರತಿವಾದಿಯ ಗಂಡನಿಗೆ ಸೇರಿದ್ದು ಎಂದರೆ ಸರಿಯಲ್ಲ , ಅದು ನನ್ನ ಗಂಡನ ಆಸ್ತಿ ಆಗಿರುತ್ತದೆ. 3ನೇ ಪ್ರತಿವಾದಿ ಅವರ ಗಂಡ ಸತ್ತ ನಂತರ ಪೌತಿ ಖಾತೆ ಆಧಾರದ ಮೇಲೆ ಅವರ ಹೆಸರಿಗೆ ಖಾತೆ ಮಾಡಿಸಿರುತ್ತಾರೆ ಎಂದರೆ ಸರಿ. ನಿಪಿ-1 ಅನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ನಿಪಿ-1 ವಂಶವೃಕ್ಷದಲ್ಲಿ ಹೇಳಿರುವ ಹಾಗೆ ಶಿವಗಂಗಮ್ಮ ಎಂದು ರಾಮೇಗೌಡರಿಗೆ ಮಗಳು ಇಲ್ಲ ಎಂದರೆ ಸರಿಯಲ್ಲ. ಶಂಕರಪ್ಪನ ಹೆಂಡತಿ ಶಿವಗಂಗಮ್ಮ ಮತ್ತು ಅವರ ಮಕ್ಕಳು ರಾಕೇಶ್ ಮತ್ತು ಕುಮಾರಸ್ವಾಮಿ, ಆದರೆ ನಿಪಿ-1 ರಲ್ಲಿ ಶಿವಗಂಗೆ ಮತ್ತು ರಾಜಶೇಖರ್ ಎಂದು ತಪ್ಪಾಗಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಮನೆಯವರು ಹೇಳಿದ ಹಾಗೆ ಬರೆಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಶಂಕರಪ್ಪನ ಹೆಂಡತಿ ಅಲ್ಲದ ಕಾರಣ ನನಗೆ ಅವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಕುಮಾರಸ್ವಾಮಿಯ ಹೆಂಡತಿ ಮತ್ತು 2ನೇ ವಾದಿ ಕುಮಾರಸ್ವಾಮಿಯ ಮಗಳು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನನ್ನ ಗುರುತಿನ ಚೀಟಿ ಮತ್ತು ನನ್ನ ಮಗಳ ಶಾಲಾ ದಾಖಲಾತಿಗಳಲ್ಲಿ ಗಂಡನ ಮತ್ತು ತಂದೆಯ ಹೆಸರು ಕುಮಾರಸ್ವಾಮಿ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗಳು 7ನೇ ತರಗತಿಯಿಂದ ಜಿ ಹೆಚ್ ಪಿ ಎಸ್, ರಾಮೇದೇವರಹಳ್ಳಿ ಶಾಲೆಯಲ್ಲಿ ಓದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ 2ನೇ ವಾದಿಯ ಶಾಲಾ ದಾಖಲಾತಿಯನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ನಾನು ಸೂರನಾಯಕನಹಳ್ಳಿಯಲ್ಲಿ ವಾಸವಾಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮೃತ ಶಂಕರಪ್ಪನವರಿಗೆ ಸೂರನಾಯಕನಹಳ್ಳಿ ಗ್ರಾಮದ ಸ ನಂ.53/2 ಆಸ್ತಿ ಬಿಟ್ಟರೆ ಬೇರೆ ಆಸ್ತಿ ಇರಲಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಆಗದವರು ನನ್ನಿಂದ ಸುಳ್ಳು ದಾವೆಯನ್ನು ಹೂಡಿಸಿ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಃ 2 ರ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಸ ನಂ.13/1 ರ ಚಕ್ಕುಬಂದಿ ನನಗೆ ಗೊತ್ತು. ಪೂಃ ಖಾಲಿ ಜಾಗ, ಪಃ ಸರ್ಕಾರಿ ರಸ್ತೆ, ಉಃ ಮಲ್ಲಪ್ಪನವರ ಜಮೀನು, ದಃ ಶಿವಮ್ಮರವರ ಜಮೀನು. ಶಂಕರಪ್ಪನವರ ತಾಯಿಯ ಹೆಸರು ಲೀಲಮ್ಮ, ತಂದೆ ಹೆಸರು ರಾಮೇಗೌಡ. ಶಂಕರಪ್ಪನವರು ದಿಃ 17-04-2017 ರಲ್ಲಿ ತೀರಿಕೊಂಡಿರುತ್ತಾರೆ. ಸಾಕ್ಷಿಗೆ ಶಂಕರಪ್ಪನವರ ಮರಣ ಪ್ರಮಾಣಪತ್ರವನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ಶಂಕರಪ್ಪನವರ ಹೆಂಡತಿ ಶಿವಗಂಗಮ್ಮ ಎಂದು ಇದೆ ಎಂದರೆ ಸರಿ. ಶಂಕರಪ್ಪ 2ನೇ ಮದುವೆ ಆಗಿರುವ ಬಗ್ಗೆ ನಾನು ದೂರು ಕೊಟ್ಟಿರುವುದಿಲ್ಲ. ಶಂಕರಪ್ಪನ 1ನೇ ಮಗ ರಾಕೇಶ್ ಯಾವಾಗ ಹುಟ್ಟಿದ್ದು ಎಂದು ನನಗೆ ಗೊತ್ತಿರುವುದಿಲ್ಲ.

ನಾನು ಶಂಕರಪ್ಪನ ಮೊದಲನೇ ಹೆಂಡತಿ ಮತ್ತು ಮಗಳು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು 3ನೇ ಪ್ರತಿವಾದಿಯ ಹತ್ತಿರ ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡಬೇಕೆಂದು ಕೇಳಿರುವುದಿಲ್ಲ. ದಾವಾ ಹೂಡುವ ಒಂದು ವಾರದ ಮೊದಲು ವ್ಯಾಜ್ಯ ಕಾರಣ ಉಂಟಾಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಗೊತ್ತಿಲ್ಲದ ಹಾಗೆ 3ನೇ ಪ್ರತಿವಾದಿ ಪೌತಿ ಖಾತೆ ಮಾಡಿರುತ್ತಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನನಗೆ ಮೋಸ ಮಾಡುವ ಉದ್ದೇಶದಿಂದ ಖಾತೆ ಮಾಡಿಸಿದ್ದಾರೆ

ಎಂದು ಹೇಳಿರುತ್ತೇನೆ, ನಾನು ಶಂಕರಪ್ಪನ ಕುಟುಂಬಕ್ಕೆ ಸೇರಿದ್ದವಳಲ್ಲದ ಕಾರಣ ನನಗೆ ಮೋಸ ಮಾಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ.

ನಾನು ಶಂಕರಪ್ಪನ ಹೆಂಡತಿ ಮತ್ತು ಮಗಳು ಅಲ್ಲದ ಕಾರಣ ದಾವಾ ಐಟಂ ನಂಃ 1 ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಶಂಕರಪ್ಪನ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**